147 (2)

Regd No BG 155 — ೨೯ — 26—4—1932

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ ಗೋಸಂರಕ್ಷಣೆ ಮಾಡಿ

ಪಾಕಿಸ್ತಾನ ಸೇನೆ ಮದ್ರಾಸ್‌ವರಿಗೆ ನುಗುವುದಂತೆ

ಪ್ರಧಾನಿ ನೆಹರು ಅನಂತರ ಭಾರತ ಶುಂಡು ಆಗುವದೆಂದು ತಾವು ನಿರ್ಣಯ ಮಾಡಿರುವಹಾಗಿ ಓರ್ವರಿಗೆ ಪಾಕಿಸ್ತಾನ ಅಧ್ಯಕ್ಷ ಅಯೂಬರು ತಿಳಿಸಿದರೆಂದು ನ್ಯೂಯಾರ್ಕಿನ ವಾರ್ತೆ ತಿಳಿಸುತ್ತದೆ. ಆ ವ್ಯಕ್ತಿ ಅನಾಮಧೇಯರಾಗಿರಲು ಇಚ್ಛಿಸಿದ್ದಾರೆ. ಭಾರತ ಒಡೆಯುವದು ಪಾಕಿಸ್ತಾನಕ್ಕೆ ಒಳ್ಳೆಯದು ಎಂದು ಅವರು ತಿಳಿಸಿರುವರು. ಪಾಕಿಸ್ತಾನ ಸೇನೆ ಮುಂದೆ ಬರಿದರೆ ಅದು ಕಾಶ್ಮೀರವನ್ನು ಪಡೆಯಲಿಯನ್ನು ಮಾತ್ರ ವಶವಾಡಿಕೊಳ್ಳುವುದಿಲ್ಲ. ಮದ್ರಾಸಿನ ವರಿಗೆ ವಶವಾಡಿಕೊಳ್ಳುತ್ತದೆ ಎಂದು ಪಾಕಿಸ್ತಾನದ ಸೇನ ಅಧಿಕಾರಿಗಳು ಜಂಭ ಮಾಡುತ್ತಿದ್ದಾರೆ ಎಂದು ವರದಿ. ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಕೊಡದಿದ್ದರೆ ಪಾಕಿಸ್ತಾನ ಚೀನಾದೊಂದಿಗೆ ಸೇರಿ ಭಾರತವನ್ನು ತಳಿಯುವುದಾಗಿ ಅಯೂಬರು ಬೆದರಿಕೆ ಹಾಕುತ್ತಿರುವರೆಂದು ಹೇಳಲಾಗಿದೆ.

ಕಾರ್ಟ್ರಿಬಲ್ ಮರಣ

ಮೊನ್ನೆ ಅಲಹಾಬಾದಿನಿಂದ ಬ್ರಿಲಿ ಜೀಲಿಗೆ ಹೆಡ್ ಕಾರ್ಟ್ರಿಬಲು ಓರ್ವನು ಪೈದಿಯೋರ್ವನನ್ನು ಕರೆದುಕೊಂಡು ಹೋಗುತ್ತಿದ್ದನು. ಹರ್ದಾಯಿ ಬಳಿ ಪೊಡವತ್ತಿದ್ದ ರೈಲಿನಿಂದ ಖೈದಿಯು ಕೆಳಗೆ ಧುಮುಕಿ ಓಡಿದ. ಅವನನ್ನು ಹಿಡಿಯಲು ಹೆಡ್ ಕಾರ್ಟ್ರಿಬಲು ಕೆಳಗೆ ಧುಮುಕಿ ರೈಲಿಗೆ ಸಿಕ್ಕಿ ಮರಣಹೊಂದಿದನು. ಖೈದಿಯನ್ನು ಕೆಲವರು ಹಿಡಿದರು. ಆಲಹಾಬಾದಿಗೆ ಅಂತ್ಯಕ್ರಿಯೆಗಾಗಿ ಕಾರ್ಟ್ರಿಬಲಿನ ಶವವನ್ನು ತಂಲಾಯಿತು.

★

ಎಬ್ಬಾ ಅಗ್ನಿ ಪರ್ವತ ಸ್ಫೋಟವಾದ ವಂದಿ ಸುಪಲಿಯು ಕಲಾನಿಯಾದಿಂದ ಬಂದಿದೆ.

ಶಬ್ದ ಮತ್ತು ನಿದ್ದೆ

ನಿನ್ನೆ ಪಧ್ಯಾಹ್ನ ಕಳೆದಿತ್ತು ಮದರಾಸು ವಿಧಾನ ಸಭೆಯಲ್ಲಿ 4 ಗಂಟೆಗಳವರಿಗೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆದಿತ್ತು. ಉರಿಯುತ್ತಿದ್ದ ಸೂರ್ಯನ ಪೆಸೆಯಿಂದ ಹೊರಗಡೆ ಪರಿಪರಿತ ಶೆಖೆ ಅನೇಕ ಸದಸ್ಯರು ವಿಶ್ರಾಂತಿ ಅಪೇಕ್ಷಿಸುವದು ಸ್ವಾಭಾವಿಕ. ಕಡೆ ಪಕ್ಷ ಒಬ್ಬರಾದರೂ ನಿದ್ರಿಸುತ್ತಿರಬಹುದೆಂದು ಶ್ರೀ ಕೆ ಸಟರಾಜ ಗೌಂಡರು ಸಭಾಧ್ಯಕ್ಷರನ್ನು ಕುರಿತು, ನಿದ್ರೆ ಮಾಡುವುದು ಅಕ್ಷೇಪಾರ್ಹವಲ್ಲವೇ ಎಂದು ಕೇಳಿದರು ಸಭೆಯ ಕಾರ್ಯಕಲಾಪಗಳನ್ನು ಕೆಡಿಸುವ ಶಬ್ದ ನಿದ್ರೆಯಿಂದ ಆದರೆ ಮಾತ್ರ ಎಂದು ಸಭಾಧ್ಯಕ್ಷರು ತಿಳಿಸಿದರು ಆಗ ಸದಸ್ಯರು ಎಚ್ಚೆತ್ತರು

ಅಣು ಪರೀಕ್ಷೆ

ಬ್ರಿಟ್ಟಿಗೆ ಸೇರಿದ ಕ್ರಿಸ್ಮಸ್ ದ್ವೀಪದಲ್ಲಿ ನಿನ್ನೆ ಬೆಳಿಗ್ಗೆ 10-45 ಗಂಟೆಯಲ್ಲಿ ಅಮೆರಿಕ ಅಣುಶಕ್ತಿಯೋಗವನ್ನು ಭೂಮಿಯ ಮೇಲೆ ನಡೆಸಿತೆಂದು ವಾಷಿಂಗ್ಟನ್ನಿನಲ್ಲಿ ಅಣು ಶಕ್ತಿ ಸಮಿತಿ ಪ್ರಕಟಿಸಿದೆ.

ಭಾರತದ ಸೂಚನೆ

ಅಣು ಅಸ್ತ್ರಗಳನ್ನು ತಯಾರಿಸುವುದೇ ಅಗಲಿ ಅಥವಾ ತರಿಸಿಕೊಳ್ಳುವದೆ ಅಗಲಿ ಭಾರತಕ್ಕೆ ಇಚ್ಛೆಯಿಲ್ಲವೆಂದು ಭಾರತ ಸರ್ಕಾರ ವಿಶ್ವಸಂಸ್ಥೆಗೆ ತಿಳಿಸಿದೆ

ರಹದಾರಿ ರದ್ದಾಗುವ ಸಂಭವ

ಗೋವಾಕ್ಕೆ ಹೋಗಲು ಇರುವ ರಹದಾರಿ ಪದ್ಧತಿ ಬೇಗನೆ ರದ್ದಾಗುವ ಸಂಭವವಿದೆ ಎಂದು ಪಾರ್ಲಿಮೆಂಟಿನಿಂದ ವಾರ್ತೆ ಬಂದಿದೆ

ಭಾರತ ಗಡಿ ಭಂಗ ಮಾಡಿದೆ ಎಂದು ಚೀನಾ ಕೂಗು

ಚೀನಾ ಪ್ರದೇಶವನ್ನು ಪತ್ತೂ ಭಂಗ ಮಾಡಿದುದರ ವಿಂದ್ಧ ಉಗ್ರ ಪ್ರತಿಭಟನೆಯನ್ನು ಭಾರತಕ್ಕೆ ವ್ಯಕ್ತಮಾಡಿರುವದು ಪಿಕೀಂಗಿನಲ್ಲಿ ನಿನ್ನೆ ಪ್ರಕಟವಾಯಿತು ಗಡಿಯಲ್ಲಿ ಇರುವ ಪರಿಸ್ಥಿತಿಗೆ ಭಾರತದ ಅಂಥಹ ಪ್ರಯತ್ನದಿಂದ ಭಂಗಮಾಡಿದಂತೆ ಆಗಿದೆ ಎಂದು ಪ್ರಕಟಣೆ ತಿಳಿಸುತ್ತದೆ. ಚೀನಾ-ಭಾರತ ಗಡಿಯ ಬಳಿ ಭಾರತ ಇನ್ನೂ ಠಾಣ್ಯಗಳನ್ನು ನಿರ್ಮಿಸಿದೆ ಎಂದೂ ವಕ್ತು ತನ್ನ ಸೇನೆಯನ್ನು ಬಲ ಪಡಿಸಿತ್ತಿದೆ ಎಂದು ಪ್ರಕಟಣೆ ತಿಳಿಸುತ್ತದೆ.

ಶಿಕ್ಷಣ ಮಟ್ಟ

ಡಾಕ್ಕಾದಿಂದ ವಾರ್ತೆ ಬಂದಿದೆ ಬೊಗ್ರಾ ವೈದ್ಯಕೀಯ ಕಾಲೇಜಿನ ಎರಡನೆಯ ವರ್ಷದ ವಿದ್ಯಾರ್ಥಿನಿಯೋರ್ವಳಿಗೆ ಶೇಕಡ 26.5 ಅಂಕಗಳು ದೊರೆತಿವೆ ಒಂದು ಸಬ್ಜಕ್ಟಿನಲ್ಲಿ ಅವಳಿಗೆ ಸೊನ್ನೆ ಸಿಕ್ಕಿದೆ. ಅವಳಷ್ಟು ಅಂಕಗಳನ್ನು ಪಡೆತ್ತಾವ ವಿದ್ಯಾರ್ಥಿನಿಯೂ ಪಡೆಯುವದು ಕಾರಣ ಅವಳಿಗೆ ಸಂಗಳೊಂದಕ್ಕೆ ಹೊಸ ಪದ್ಯ ಸಹಾಯವನ್ನು ಹೊಡಬೇಕೆಂದು ಬುದಾಗಿ ವೈದ್ಯಕೀಯ ಸಂಗಿನ ಶಿಕ್ಷಣ ಸಮಿತಿ ಶಿಫಾರಸು ಮಾಡಿದೆ.

ತಿರಸ್ಕರಣ

ಮುಂದಾರು ರಾಷ್ಟ್ರಗಳ ಅಣು ಪ್ರಯೋಗ ನಿರೋಧ ಒಪ್ಪಂದ ಪಂಧಾನಗಳಿಗೆ ತಟಸ್ಥ ರಾಷ್ಟ್ರಗಳನ್ನು ಸೇರಿಸಿಕೊಳ್ಳಬೇಕೆಂದು ನಿಶ್ಶಸ್ತ್ರೀಕರಣ ಸಂಮೇಳನದಲ್ಲಿ ಅಮೇರಿಕ ಮಾಡಿದ ಸೂಚನೆಯನ್ನು ರಷ್ಯ ತಿರಸ್ಕರಿಸಿತು ಎಂದು ಜಿನೀವಾದಿಂದ ವಾರ್ತೆ ಬಂದಿದೆ. ಪಧ್ಯಕ್ಕೆ ಅಣು ಪ್ರಯೋಗ ಮಾಡಕೂಡದೆಂದು 17 ರಾಷ್ಟ್ರಗಳ ನಿಶ್ಶಸ್ತ್ರೀಕರಣ ಸಂಮೇಳನದಲ್ಲಿ ಭಾರತ ಮಾಡಿದ ಮನವಿಯನ್ನು ಅಮೆರಿಕ ತಿರಸ್ಕರಿಸಿತು.

ಕಾಶ್ಮೀರ ಚರ್ಚೆ

ವಿಶ್ವಸಂಸ್ಥೆಗೆ ನಡೆಯುಬೇಕಾದಂತೆ ಪಾಕಿಸ್ತಾನ ನಡೆಯುದಿರುವದೇ ಕಾಶ್ಮೀರದ ಮೇಲೆ ಸಮಸ್ಯೆಯುಂಟಾಗಲು ಕಾರಣ ಎಂದು ನಾಳೆ ವಿಶ್ವಭದ್ರತಾ ಸಮಿತಿಗೆ ಭಾರತ ತಿಳಿಸುವದು.

ತಿದ್ದಿಲ್ಲ

ಕಾಶ್ಮೀರದ ಬಗ್ಗೆ ತಪ್ಪಾಗಿ ಪ್ರಕಟಿಸಿರುವ ನಕ್ಷೆಯನ್ನು ವಿಶ್ವಸಂಸ್ಥೆ ಇನ್ನೂ ತಿದ್ದಿಲ್ಲ ಎಂದು ವಿದೇಶ ಉಪ ಮಂತ್ರಿ ಶ್ರೀಮತಿ ಲಕ್ಷ್ಮೀ ಮೆನನ್ನರು ರಾಜ್ಯಸಭೆಯಲ್ಲಿ ತಿಳಿಸಿದರು.

ಮರಣ

ಜಂತಪಡ್ಡಾದಲ್ಲಿ ಸಿಡಿಲು ಬಡಿದು ಮೂವರು ಮರಣಹೊಂದಿದರು.

ಅಪಘಾತ ಸಾವುಗಳು

ಈಸ್ಟರ್ ರಜಾ ದಿನಗಳಲ್ಲಿ ರಸ್ತೆ ಅಪಘಾತಗಳಲ್ಲಿ 61 ಮಂದಿ ಬ್ರಿಟನ್ನಲ್ಲಿ ಸತ್ತರೆಂದು ಅಂಡ್ರ ವಾರ್ತೆ.

ಡೆಹರ್ಡ್‌ಗೆ ನೆಹರು

ಮುಂದಾರು ದಿವಸಗಳ ವಿಶ್ರಾಂತಿಗಾಗಿ ನಿನ್ನೆ ಪಂ|| ನೆಹರು ನವದೆಹಲಿಯಿಂದ ಡೆಹರ್ಡೂನ್‌ಗೆ ತೆರಳಿದರು.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಮ್ಸುಜೋಯಿಸರಿಂದ
27 ಅಪ್ಪಮಿ ಉತ್ತರಾಷಾಢ
೦೦೦

ಡಚ್ಚರ್ಡಗುಗಳ ನಿಶೇಧಕ್ಕೆ ಇಂಡೋನೇಷ್ಯದಲ್ಲಿ ಕರೆಕೊಟ್ಟಿದೆ

ಶ್ರೀ ನಿಜಲಿಂಗಪ್ಪನವರ ಉಪಚುನಾವಣೆ

ಜನನಾಯಕರಾದ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರನ್ನು ಬಾಗಲಕೋಟೆಯ ನುತಕ್ಷೇತ್ರಕ್ಕೆ ಆಮಂತ್ರಿಸುವಾಗ ಅಲ್ಲಿ ಯಾರು ಎಷ್ಟು ಪ್ರಯತ್ನ ಮಾಡಿದರೂ ಆರಿಸಿ ಬರುವರೆಂಬ ಹದಿನಾರಾಣೆ ಆತ್ಮವಿಶ್ವಾಸದಿಂದ ಸೂಚಿಸಿದ್ದಾಯಿತು ; ಆದರೆ ಅವರೀಗ ಈ ಪತಕ್ಷೇತ್ರದಿಂದ ನಿಂತುಕೊಳ್ಳುವುದು ನಿಶ್ಚಿತವಾದ ಬಳಿಕ ಗುಂಪುಗಾರಿಕೆಯ ಮನೋವೃತ್ತಿಯ ರಾಜಕಾರಣಿಗಳು ಅಲ್ಲಿರುವ ಜನಸಾಮಾನ್ಯರಲ್ಲಿ ಹುಸಿಯಾದ ಅನೇಕ ಸಂದೇಹಗಳನ್ನು ಏಳ್ಪುತ್ತ ನಡೆದಿರುವರೆಂಬುದನ್ನು ಲಕ್ಷಿಸದಿದ್ದರೆ ಅನರ್ಥವಾದೀತು ! ಎಚ್ಚರಿಕೆ ! ಅವರು ಅಲ್ಲಿ ಆರಿಸಿಬರುವಂತೆ ಇಂದ್ರಜಾಲ-ಮಹೇಂದ್ರಜಾಲವನ್ನು ಹಂಡುವ ಚಕ್ರವ್ಯೂಹವನ್ನು ರಚಿಸಹತ್ತಿದ್ದಾರೆ ; ಅದನ್ನು ಎದುರಿಸಲು ಈಗಿನಿಂದಲೇ ಶಕ್ತ ಉಪಾಯ ಯೋಜನೆಯನ್ನು ಮಾಡಬೇಕು.

ಶ್ರೀ ನಿಜಲಿಂಗಪ್ಪನವರು ಈ ಉಪಚುನಾವಣೆಯಲ್ಲಿ ಆರಿಸಿಬಂದ ಕೂಡಲೆ ರಾಜ್ಯದ ಮುಖ್ಯಮಂತ್ರಿಗಳಾಗಲಿರುವದರಿಂದ ಅವರು ತಮ್ಮ ನಿಲುವೆಯನ್ನು ಈಗ ಸ್ಪಷ್ಟಪಡಿಸಬೇಕು—

(1) ರಾಜ್ಯದ ಹೆಸರು 'ಕರ್ನಾಟಕ' ಎಂದಿಡಲು ವೈಯಕ್ತಿಕವಾಗಿ ಅವರು ಒಪ್ಪುವುದಾದರೂ ಅದಕ್ಕೆ ರಾಜ್ಯ ಸರ್ಕಾರದ ಮುದ್ರೆಯೊತ್ತುವ ದಿಶೆಯಲ್ಲಿ ಪ್ರಯತ್ನಿಸಿ ಪ್ರಯತ್ನ ಮಾಡಿ, ಇಷ್ಟು ಕಾಲಾವಧಿಯಲ್ಲಿ ಆ ಕಾರ್ಯ ಮಾಡಿ ಕೊಡುವೆನೆಂಬ ಸ್ಪಷ್ಟ ಆಶ್ವಾಸನವೀಯಬೇಕು.

(2) ರಾಜ್ಯದ ಆಡಳಿತಾಧಿಕಾರ ಯಂತ್ರವನ್ನು ಗೋವಾವಿಮೋಚನಾ ಸಮಿತಿಯ ವಂದಿಯ ವೇರೆಗೆ ಸರಿಯಾದ ಮಾರ್ಗ ಕ್ರಮಿಸುವಂತೆ ಉಪಾಯ ಯೋಜನೆ

(3) ರಾಜ್ಯದ ಯೋಗಕ್ಷೇಮದ ಗುಂಪಿನ ರಾಜಕೀಯವನ್ನು ಕೊಡೆ ದೋಡಿಸುವ ಪ್ರಭಾವೀ ಕಾರ್ಯಕ್ರಮವೇನು ?

(4) ಗೋವೆಯ ಸಂಪರ್ಕ ಸಮಿತಿಯ ಅಧ್ಯಕ್ಷರಾಗಿ ಇಲ್ಲಿಯವರೆಗೆ ಮಾಡಿದ ಕಾರ್ಯವೇನು ? ಮುಂದೇನು ಉಪಾಯ ಯೋಜನೆಗಳನ್ನು ಮಾಡುವರೆಂಬುದು ಸ್ಪಷ್ಟವಾಗಬೇಕು.

(5) ಹಳೇ ಮೈಸೂರಿನ ಸಂಸ್ಥಾನೀ ಪದ್ಧತಿಯ ಆಡಳಿತಾಧಿಕಾರವನ್ನು ಜಿಗಟು ತನದಿಂದ ಕಿತ್ತೊಗದು, ಅದರ ಸ್ಥಳದಲ್ಲಿ ಹೊಸ ಕರ್ನಾಟಕ ಅಂದರೆ ಮುಂಬೈ-ಮದರಾಸು ರಾಜ್ಯದ ಆಡಳಿತದಲ್ಲಿ ಕಂಡುಬರುವ ಶಿಸ್ತು, ಸಂಘಟನೆ, ಬಿಗುವು ಹಾಗು ಸಾರ್ವಜನಿಕರ ಯೋಗಕ್ಷೇಮದ ಪ್ರಾಮಾಣಿಕ ಹಿತಚಿಂತನೆ ಮಾಡುವಂಥ ಉಪಾಯ ಯೋಜನೆ ಕೈಕೊಳ್ಳುವ ತೀವ್ರ ಆಕಾಂಕ್ಷೆ.

(6) ಕನ್ನಡನಾಡಿನ ವ್ಯಾಪಾರೋದ್ಯಮವು ಕನ್ನಡಿಗರ ಕೈ ಬಿಡುತ್ತಾ ಇತರ ಭಾಷಾ ಬಾಂಧವರ ಹಸ್ತಗತವಾಗಹತ್ತಿದೆ ಎಂಬುದು ಒಹಿರಂಗವಿಟ್ಟ ಒಂದು ರಹಸ್ಯವಾಗಿದೆ : ಇದನ್ನು ತಡೆಹಿಡಿದು ಕನ್ನಡ ವ್ಯಾಪಾರೋದ್ಯಮಿಗಳಿಗೆ ಸರಿಯಾದ ದಿಶೆಯಲ್ಲಿ ಪ್ರೋತ್ಸಾಹ ಕೊಡುವ ಅವಶ್ಯಕತೆ:

(7) ಕೇಂದ್ರ ಸರಕಾರದೊಡನೆ ನೇರಾದ ಸಮಾಲೋಚನೆ ಮಾಡಿ, ಬಂದರು, ರೈಲ್ವೇ ಮಾರ್ಗ, ವಿಮಾನ ನಿಲ್ದಾಣದಂಥ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲು ಪ್ರಭಾವೀ ಕಾರ್ಯಕ್ರಮ ಕೈಕೊಳ್ಳುವುದು.

ಈ ಅಂಶಗಳ ಬಗ್ಗೆ ಅವರಿಂದ ಸಾರ್ವಜನಿಕವಾಗಿ ನಿರ್ದಿಷ್ಟ ಹಾಗೂ ಸ್ಪಷ್ಟ ಆಶ್ವಾಸನ ದೊರೆಯುಬೇಕು ; ಅಡ್ಡಗೋಡೆಯ ಮೇಲಿನ ದೀಪದಂತೆ 'ಹಾಗೂ ಸ್ಪೈ ಹೀಗೂ ಸ್ಪೈ' ಎಂದರೆ ಕಾಲಕ್ಷೇಪವಾದೀತು. ಈ ಮತಕ್ಷೇತ್ರದ ಜನ ಹಿಂದಕ್ಕೆ ಕರೆಯಿಸಿಕೊಳ್ಳುವ ಅಧಿಕಾರವಿರಬೇಕು. (ಕನ್ನಡಿಗ)

ವುಡ್‌ಲ್ಯಾಂಡ್ಸ್ ಪ್ರಶಂಸನೀಯ 11 ನೆವಾರ

ಒಂದು ಲಕ್ಷಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸಿರುವ ಅತ್ಯುತ್ತಮ ಚಿತ್ರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಭಾನು, ಲಲಿತಾ ಪವಾರ್, ಹೆಲೆ

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— 20-4-62 ರಿಂದ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]



19 ನೇ ಶತಮಾನದಲ್ಲಿ ಅಮೇರಿಕಾದಲ್ಲಿ ಬಹು ಪ್ರಖ್ಯಾತ ಪುರುಷರಲ್ಲಿ ಒಬ್ಬರಾದ ಪಥವು ರೈಲ್ವೇ ಇಂಜನ್ನು ನಿರ್ಮಿಸಿದ, ಮತ್ತಿತರ ಅನೇಕ ದೇಶೋಪ್ಯೋಗಿಯಾದ ಕಾರ್ಯಗಳನ್ನು ನೆರವೇರಿಸಿದ ಪೀಟರ್ ಕೂಪರ್ ಸಂಬಂಧಿಸಿದ ಚಿತ್ರಗಳು

For Quality Printing

L. N. Press

Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕಾ ಫಾರ್ಮಸಿ

ಲಾನ್ಸ್‌ಡೌನ್ ಬಜಾರ್ ಮೈಸೂರು

Edited, Printed & Published by the Proprietor, Dharma Prachara Niyata M. S. Krishna Rao, at the Satyavadi Press, Chamarajapuram, Mysore 4.